ಸರ್ಕಾರದ ಗಮನದಲ್ಲಿದೆಯೇ ? ಈ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರಿಂದ ಸದನದಲ್ಲಿ ಹೇಳಿಕೆಯನ್ನು ಬಯಸಿದ್ದೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು):- ಮಾನ್ಯ ಅಧ್ಯಕ್ಷರೇ, ಈ ವಿಷಯದ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ತಿಳಿಸುತ್ತೇನೆ.

ಪ್ರೌಢ ಶಿಕ್ಷಣ ಮಂಡಳಿಯವರು ಎಸ್. ಎಸ್.ಎಲ್.ಸಿ ಪರೀಕ್ಷೆಯ ಅಂಕ ಪಟ್ಟಿಯಲ್ಲಿ ಜನ್ಮ ದಿನಾಂಕವನ್ನು ನಮೂದಿಸಿರುವ ಬಗ್ಗೆ.

ಶ್ರೀ ಕೆ. ಲಕ್ಕಣ್ಣ (ರಾಜಾಜಿ ನಗರ):- ಮಾನ್ಯ ಅಧ್ಯಕ್ಷರೇ, ಪ್ರೌಢ ಶಿಕ್ಷಣ, ಮಂಡಳಿಯವರು ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆ ನಂತರ ಅಂಕಪಟ್ಟಿಯನ್ನು ಕೊಡುವಾಗ ಅದರಲ್ಲಿ ಅಭ್ಯರ್ಥಿಗಳ ಜನ್ಮ ದಿನಾಂಕವನ್ನು ನಮೂದಿಸಲಾಗಿರುತ್ತದೆ. ಈ ಸಂಬಂಧದಲ್ಲಿ ಜನ್ಮ ದಿನಾಂಕದ ವ್ಯತ್ಯಾಸಗಳನ್ನು ಸರಿಪಡಿಸುವ ಬಗ್ಗೆ ಅಭ್ಯರ್ಥಿಗಳು ಅರ್ಜಿಗಳನ್ನು ಸಲ್ಲಿಸಿದ್ದರೂ ಕೂಡ, ನ್ಯಾಯಾಲಯವು ಆದೇಶ ನೀಡಿದ್ದರೂ, ಹಾಗೂ ಜರೂರಾಗಿ ವಿಲೇವಾರಿ ಮಾಡಲು ನಿಯಮಗಳಿದ್ದರೂ ಕೂಡ, ವಿಲೇವಾರಿ ಮಾಡದೆ ವಿನಾಕಾರಣ, ವಿಳಂಬ ಮಾಡುತ್ತಿರುವುದರಿಂದ, ಸಂಬಂಧಿಸಿದ ಅಭ್ಯರ್ಥಿಗಳಿಗೆ ಮುಂದಿನ ವ್ಯಾಸಂಗಕ್ಕೆ ತೊಂದರೆಯಾಗುತ್ತಿದ್ದು ಮತ್ತು ಕೆಲಸಕ್ಕೆ ಸೇರಲು ಅಡಚಣೆ ಉಂಟಾಗಿರುತ್ತದೆ. ಆಕಾರಣ ಈಗ ಹಾಲಿ ಮಂಡಳಿಯ ಮುಂದೆ ಬಾಕಿ ಉಳಿದಿರುವ ಇಂತಹ ಜನ್ಮ ದಿನಾಂಕದ ಸರಿಪಡಿಸುವ ಅರ್ಜಿಗಳನ್ನು ಕೂಡಲೇ ವಿಲೇವಾರಿ ಮಾಡಬೇಕೆಂದು ಮಾನ್ಯ ಪ್ರೌಢ ಶಿಕ್ಷಣ ಸಚಿವರಲ್ಲಿ ಕೋರುತ್ತೇನೆ. ಅಭ್ಯರ್ಥಿಯ ಹೆಸರು : ಮಲ್ಲಿಕಾರ್ಜುನ ಹೆಗ್ಡೆ ಪಿ. ಕಾನೂನು ವಿಭಾಗದ ಕಡತದ ಸಂಖ್ಯೆ : 450 ಎಲ್ ಎಸ್ ಬಿ 91, ದಿನಾಂಕ 11-7-1991.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ :- (ಕಾರ್ಮಿಕ ಸಚಿವರು):- ಮಾನ್ಯ ಅಧ್ಯಕ್ಷರೇ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪರವಾಗಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಎಸ್.ಎಸ್.ಎಲ್.ಸಿ. ಪರೀಕ್ಷೆಯ ನಂತರ ಪ್ರಮಾಣ ಪತ್ರಗಳನ್ನು ಶಾಲೆಗಳಿಗೆ ಕರ್ನಾಟಕ ಪ್ರೌಢ ಶಿಕ್ಷಣ ಮಂಡಳಿಯಿಂದ ರವಾನಿಸಲಾಗುತ್ತಿದೆ. ಈ ರೀತಿ ಕಳುಹಿಸಿದ ಪ್ರಮಾಣ ಪತ್ರಗಳಲ್ಲಿ ಜನ್ಮ ದಿನಾಂಕದ ಬಗ್ಗೆ ಏನಾದರೂ ವ್ಯತ್ಯಾಸವಿದ್ದಲ್ಲಿ ಸಂಬಂಧಪಟ್ಟ ಅಭ್ಯರ್ಥಿಯು ಬೇಕಾಗಿರುವ ದಾಖಲೆಗಳೊಂದಿಗೆ ಶಾಲೆಯ ಮುಖಾಂತರ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ಕಳುಹಿಸಿದಲ್ಲಿ ಸರಿಪಡಿಸಲಾಗುತ್ತದೆ. ಈ ರೀತಿ ಬಂದ ಅರ್ಜಿಗಳಲ್ಲಿ ಜನ್ಮ ದಿನಾಂಕವು ಪರೀಕ್ಷೆಗೆ ಕಳುಹಿಸಿದ ಅರ್ಜಿಯೊಂದಿಗೆ ಹೋಲಿಸಿದಾಗ ಪ್ರಮಾಣ ಪತ್ರದಲ್ಲಿ ವ್ಯತ್ಯಾಸ ಕಂಡುಬಂದಾಗ ಅದನ್ನು ಕೂಡಲೇ ತಿದ್ದುಪಡಿ ಮಾಡಿ ಕೊಡಲಾಗುತ್ತದೆ.

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯಿಂದ ಪತ್ರಗಳನ್ನು ಶಾಲೆಗೆ ರವಾನಿಸುವಾಗ, 60 ದಿನಗಳೊಳಗಾಗಿ ಪ್ರಮಾಣ ಪತ್ರದಲ್ಲಿ ಏನಾದರೂ ವ್ಯತ್ಯಾಸಗಳಿದ್ದಲ್ಲಿ (ಅಂದರೆ ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ಜನ್ಮ ದಿನಾಂಕ ಮತ್ತು ಇತರೆ) ಮಂಡಳಿಗೆ ಶಾಲಾ ದಾಖಲಾತಿಗಳೊಂದಿಗೆ ತಿದ್ದುಪಡಿಗಾಗಿ ಯೋಗ್ಯ ವಿವರ, ಅಡಕಗಳೊಂದಿಗೆ ರವಾನಿಸಲು ಸಹಾ ತಿಳಿಸಲಾಗಿದೆ.

ಕುಂದಾಪುರ ತಾಲ್ಲೂಕಿನ ಅಂಪಾರು ಮಂಡಲದ ಕಾರ್ಯದರ್ಶಿ ಮತ್ತು ಆಡಳಿತ ಅಧಿಕಾರಿಗಳಿಂದ ಅಧಿಕಾರ ದುರುಪಯೋಗ.

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ (ಕುಂದಾಪುರ):- ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಅಂಪಾರ ಮಂಡಲದ ಕಾರ್ಯದರ್ಶಿ ಮತ್ತು ಆಡಳಿತಾಧಿಕಾರಿಗಳು ಅಧಿಕಾರ ದುರುಪಯೋಗ ಹಾಗೂ ಭ್ರಷ್ಟಾಚಾರಗಳಿಂದ ಮಂಡಲ ಪಂಚಾಯತ್, ಜಿಲ್ಲಾಪರಿಷತ್ ಹಾಗೂ ಸರಕಾರದ ಬೊಕ್ಕಸಕ್ಕೆ ಸಾವಿರಾರು ರೂಪಾಯಿಗಳ